**ARCHIVED DOCUMENT.** As of December 13, 2022, this document is no longer in force.

# ಶಿಶುಗಳು ಮತ್ತು ಎಳೆಯ ಮಕ್ಕಳ ಸೇವೆಗಳಿಗೆ ವೈಯಕ್ತಿಕವಾಗಿ ಪ್ರಾರಂಭಿಕ ಬೆಂಬಲಕ್ಕೆ (ESIT) ಪರಿವರ್ತನೆಯಾಗುವ ಕುಟುಂಬಗಳಿಗಾಗಿ ಮಾರ್ಗಸೂಚಿ



ESIT ಕಾರ್ಯಕ್ರಮ ನಿಮ್ಮ ಕುಟುಂಬವನ್ನು ಸುರಕ್ಷಿತ ಮತ್ತು ಆರೋಗ್ಯವಂತರಾಗಿರಲು ಬಯಸುತ್ತದೆ. ನಿಮ್ಮನ್ನು ಕಾಣಲು ಬರುವ ಸೇವಾ ಪೂರೈಕೆದಾರರು, ರಾಜ್ಯ ಮತ್ತು ಅವರ ಏಜನ್ಸಿಯ ಮಾರ್ಗಸೂಚಿಗಳನ್ನು ಅನುಸರಿಸುತ್ತಾರೆ.

## ನಾವು ವೈಯಕ್ತಿಕ ಸೇವೆಗಳಿಗೆ ಪರಿವರ್ತಿತರಾಗಬೇಕೇ?

ನಿಮ್ಮ ಮಗುವಿನ ಮತ್ತು ಕುಟುಂಬದ ಅಗತ್ಯಗಳನ್ನು ಇತರರಿಗಿಂತ ನೀವು ಚೆನ್ನಾಗಿ ತಿಳಿದಿರುವಿರಿ ಮತ್ತು ನೀವು ವೈಯಕ್ತಿಕ ಸೇವೆಗಳಿಗೆ ಪರಿವರ್ತಿತರಾಗಲು ಸೂಕ್ತ ಸಮಯವನ್ನು ಆಯ್ಕೆ ಮಾಡಬಹುದು. ನಿಮ್ಮ ಕೌಟುಂಬಿಕ ಸಂಪನ್ಮೂಲ ಸಂಯೋಜಕರು ಮತ್ತು ನಿಮ್ಮ ಇತರ ಸೇವಾ ಪೂರೈಕೆದಾರರು ನಿಮ್ಮ ಆಯ್ಕೆಗಳೊಂದಿಗೆ ಚರ್ಚಿಸಲು ಲಭ್ಯವಿರುತ್ತಾರೆ.

## ನನ್ನ ಆಯ್ಕೆಗಳೇನು?

ಕುಟುಂಬಗಳು ವಿವಿಧ ರೀತಿಯ ಸೇವಾ ವಿತರಣೆಯ ಆಯ್ಕೆಗಳನ್ನು ಹೊಂದಿರುತ್ತವೆ. ಉದಾಹರಣೆಗೆ:

- ಟೆಲೆ-ಪ್ರಾಕ್ಟಿಸ್ ಸೇವೆಗಳೊಂದಿಗೆ ನೀವು ಮುಂದುವರಿಯುವುದು.
- ನಿಮ್ಮ ಮನೆಗೆ ಪೂರೈಕೆದಾರರು ಬರುವುದನ್ನು ಆಯ್ಕೆ ಮಾಡುವುದು.
- ಪೂರೈಕೆದಾರರು ಹೊರಗಡೆ ಅಂದರೆ ಪಾರ್ಕ್ ಅಥವಾ ನಿಮ್ಮ ಮನೆಯ ಹಿತ್ತಲಲ್ಲಿ ಭೇಟಿಯಾಗುವುದನ್ನು ಆಯ್ಕೆ ಮಾಡುವುದು.
- ಅಥವಾ ಈ ಆಯ್ಕೆಗಳ ಯಾವುದೇ ಸಂಯೋಜನೆ.

## ವೈಯಕ್ತಿಕ ಸೇವಾ ಸಮಯದಲ್ಲಿ ಮಾಸ್ಕ್ ಅನ್ನು ಯಾರು ಧರಿಸಬೇಕು?

ಪೂರೈಕೆದಾರರು ನಿಮ್ಮ ಮನೆಯಲ್ಲಿ ಮಾಸ್ಕ್ ಧರಿಸುತ್ತಾರೆ. ಮನೆ ಒಳಗಡೆ ಭೇಟಿ ಮಾಡುವ ಮೊದಲು, ಮಾಸ್ಕ ಧರಿಸುವ ವ್ಯಕ್ತಿ ಹೇಗೆ ಕಾಣುತ್ತಾರೆ ಎಂಬುದನ್ನು ನಿಮ್ಮ ಮಗುವಿಗೆ ತೋರಿಸಲು ನೀವು ನಿಮ್ಮ ಪೂರೈಕೆದಾರರೊಂದಿಗೆ ವೀಡಿಯೋ ಕರೆಯೊಂದನ್ನು ಮಾಡಲು ಬಯಸಬಹುದು. ಮಾಸ್ಕ ಧರಿಸುವುದು ಪ್ರತಿಯೊಬ್ಬರನ್ನು ಸುರಕ್ಷಿತವಾಗಿ ಇರಿಸುತ್ತದೆ ಎಂದು ನಿಮ್ಮ ಮಗುವಿಗೆ ವಿವರಿಸಿ. ವೈಯಕ್ತಿಕ ಸೇವೆಗಳನ್ನು ಸ್ವೀಕರಿಸುವ ನಿಮ್ಮ ಮಗು ಮಾಸ್ಕ್ ಧರಿಸುವ ಅಗತ್ಯವಿಲ್ಲ. ಆದರೆ, ನೀವು ಮತ್ತು ನಿಮ್ಮ ಮನೆಯಲ್ಲಿರುವ 5 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳು ಮಾಸ್ಕ್ ಧರಿಸುವಂತೆ ಕೇಳಲಾಗುತ್ತದೆ.

## ನನ್ನ ಪೂರೈಕೆದಾರರು ನಮ್ಮ ಮನೆಗೆ ಬಂದಾಗ ನನ್ನ ಎಲ್ಲಾ ಕೆಲಸ ಕಾರ್ಯಗಳು ಮೊದಲಿನಂತೆಯೇ ಇರುತ್ತವೆಯೇ?

ನೀವು ವೈಯಕ್ತಿಗ ಸೇವೆಗಳಿಗೆ ಪರಿವರ್ತಿಸಲು ನಿರ್ಧರಿಸಿದಲ್ಲಿ, ನಿಮ್ಮ ಸೇವಾ ಪೂರೈಕೆದಾರರು ಏಜನ್ಸಿಯ ಸುರಕ್ಷಾ ಅಗತ್ಯಗಳನ್ನು ಪರಿಶೀಲಿಸುತ್ತಾರೆ ಮತ್ತು ಅವು ಹೇಗಿರಬೇಕೆಂಬುದನ್ನು ವಿವರಿಸುತ್ತಾರೆ. ಈ ಅಗತ್ಯಗಳು ಭೇಟಿಗಳನ್ನು ಮೊದಮೊದಲು ವಿಭಿನ್ನವಾಗಿಸಬಹುದು, ಆದರೆ ಅವು ನಿಮ್ಮ ಸುರಕ್ಷತೆಗಾಗಿಯೇ ಇರುತ್ತವೆ. ನಿಮ್ಮ ಸೇವಾ ಪೂರೈಕೆದಾರರು ವೈಯಕ್ತಿಕ ಸೇವೆಗಳನ್ನು ಒದಗಿಸುತ್ತಿದ್ದರೂ ಸಹಿತ, ಅವು ಈ ಮೊದಲಿನ ಸಾಂಕ್ರಾಮಿಕ ಪರಿಸ್ಥಿತಿಗಿಂತ ಬೇರೆಯಾಗಿರಲಿಕ್ಕಿಲ್ಲ. ನೀವು ಮತ್ತು ನಿಮ್ಮ ಮಗು ಭೇಟಿಗಳಲ್ಲಿ ಹಿತಕರ ಅನುಭವವನ್ನು ಹೊಂದುವುದು ಮುಖ್ಯವಾಗಿರುತ್ತದೆ.

## ಹೆಚ್ಚಿನ ಪ್ರಶ್ನೆಗಳಿವೆಯೇ?

ನಾವು ನಿಮ್ಮ ಮಗುವಿನ ಅಭಿವೃದ್ಧಿಯ ಗುರಿಯನ್ನು ಸಾಧಿಸಲು ಕೆಲಸಮಾಡುತ್ತಿರುವಾಗ, ನಿಮ್ಮ ಕುಟುಂಬವನ್ನು ಸುರಕ್ಷಿತವಾಗಿರಿಸುವ ಆಯ್ಕೆಗಳನ್ನು ಹುಡುಕಲು ಕಟಿಬದ್ಧರಾಗಿರುತ್ತೇವೆ. ನೀವು ಯಾವುದೇ ಪ್ರಶ್ನೆಗಳನ್ನು ಹೊಂದಿದ್ದಲ್ಲಿ, ದಯವಿಟ್ಟು ನಿಮ್ಮ ಸೇವಾ ಪೂರೈಕೆದಾರರನ್ನು ಅಥವಾ ನಿಮ್ಮ ಕುಟುಂಬದ ಸಂಪನ್ಮೂಲ ಸಂಯೋಜಕರನ್ನು ಕೇಳಿ.

---

ನೀವು ಈ ದಾಖಲೆಯ ಪ್ರತಿಗಳನ್ನು ಪರ್ಯಾಯ ಸ್ವರೂಪದಲ್ಲಿ ಅಥವಾ ಭಾಷೆಯಲ್ಲಿ ಬಯಸುತ್ತಿದ್ದಲ್ಲಿ ದಯವಿಟ್ಟು *DCYF Constituent Relations (1-800-723-4831 | 360-902-8060, **ConstRelations@dcyf.wa.gov**).* ಸಂಪರ್ಕಿಸಿ

DCYF PUBLICATION FS_0059 KN (04-2021) Kannada

Washington State Department of
CHILDREN, YOUTH & FAMILIES